**Akashvani : Bangalore**
**National Bulletin In Kannada**
**05.04.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.04.2025 / 19.35 hrs**

**<><*<><>*><>**

ಮುಖ್ಯಾಂಶಗಳು

೧. ಭಾರತ- ಶ್ರೀಲಂಕಾ, ರಕ್ಷಣೆ, ಇಂಧನ ಸೇರಿದಂತೆ ಮಹತ್ವದ ಕ್ಷೇತ್ರಗಳಲ್ಲಿ ಮೈತ್ರಿ ವರ್ಧನೆ; ಪ್ರಧಾನಿ ನರೇಂದ್ರ ಮೋದಿ- ಅನುರಾಕುಮಾರ ದಿಸ್ಸಾನಾಯಕೆ ಮಾತುಕತೆ

೨. ಹಿಂದೂ ಮಹಾಸಾಗರದಲ್ಲಿ ಶಾಂತಿ ಸ್ಥಿರತೆ ಕಾಪಾಡುವಲ್ಲಿ ಭಾರತೀಯ ನೌಕಾಪಡೆ ಪಾತ್ರ ಮಹತ್ವದ್ದು- ರಕ್ಷಣಾ ಸಚಿವ ರಾಜನಾಥ್ ಸಿಂಗ್

೩. ರಾಮೇಶ್ವರಂನ ಆಧುನೀಕೃತ ಐತಿಹಾಸಿಕ 'ಪಂಬನ್ ಸೇತುವೆ'; ನಾಳೆ ಪ್ರಧಾನಿಯವರಿಂದ ಉದ್ಘಾಟನೆ

೪. ಐಪಿಎಲ್ ಟಿ-೨೦ ಕ್ರಿಕೆಟ್; ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್‌ಗೆ ೨೫ ರನ್‌ಗಳ ಗೆಲುವು

**<><*<><>*><>**

ಶ್ರೀಲಂಕಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಅಲ್ಲಿನ ಅಧ್ಯಕ್ಷ ಅನುರಾಕುಮಾರ್ ದಿಸ್ಸಾನಾಯಕೆ ಅವರೊಂದಿಗೆ ಕೊಲೊಂಬೋದಲ್ಲಿಂದು ದ್ವಿಪಕ್ಷೀಯ ಮೈತ್ರಿಯನ್ನು ವರ್ಧಿಸುವ ಕುರಿತಂತೆ ವ್ಯಾಪಕ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ನಡೆಸಲಾದ ಜಂಟಿ ಸುದ್ದಿ ಹೇಳಿಕೆಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಶ್ರೀಲಂಕಾಕ್ಕೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು. ಭಾರತ ತನ್ನ ನೆರೆ ಮೊದಲು ನೀತಿ ಹಾಗೂ ಮಹಾಸಾಗರ ದೂರದೃಷ್ಟಿಗೂ ಸಹಕಾರ ವ್ಯಕ್ತಪಡಿಸಿದರು. ಅಧ್ಯಕ್ಷ ದಿಸ್ಸಾನಾಯಕೆ ಮಾತನಾಡಿ, ಶ್ರೀಲಂಕಾ ಎದುರಿಸಿದ ಅನೇಕ ಕಠಿಣ ಪರಿಸ್ಥಿತಿಯಲ್ಲಿ ಭಾರತ ಸಹಾಯ ಹಸ್ತ ನೀಡಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ತಿಳಿಸುತ್ತಿರುವುದಾಗಿ ಹೇಳಿದರು. ಭಾರತದ ಭದ್ರತೆ ಅಥವಾ ಪ್ರಾದೇಶಿಕ ಸ್ಥಿರತೆಗೆ ತೊಂದರೆ ಉಂಟು ಮಾಡಬಹುದಾದ ಚಟುವಟಿಕೆಗೆ ಶ್ರೀಲಂಕಾದ ಪ್ರದೇಶ ಬಳಸುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಅವರು ಪುನರುಚ್ಚರಿಸಿದರು. ಶ್ರೀಲಂಕಾದ ಯುಡಿಐ ಯೋಜನೆಗೆ ಭಾರತ ಬೆಂಬಲ ನೀಡುವುದು ಎಂದು ಪ್ರಧಾನಿ ನರೇಂದ್ರ ಮೋದಿ ಈ ಸಂದರ್ಭದಲ್ಲಿ ಘೋಷಿಸಿದರು. ಭಾರತದ ಎನ್‌ಟಿಪಿಸಿ ಮತ್ತು ಸಿಲೋನ್ ಎಲೆಕ್ಟ್ರಿಸಿಟಿ ಬೋರ್ಡ್ ಜಂಟಿಯಾಗಿ ಜಾರಿಗೊಳಿಸಲಿರುವ ಸಂಪುರ ವಿದ್ಯುಚ್ಛಕ್ತಿ ಯೋಜನೆಯ ವರ್ಚುವಲ್ ಸಮಾರಂಭದಲ್ಲಿ ಉಭಯ ಧುರೀಣರು ಪಾಲ್ಗೊಂಡರು. ಪ್ರಧಾನಿ ನರೇಂದ್ರ ಮೋದಿ ಅವರು, ಶ್ರೀಲಂಕಾ ಅಧ್ಯಕ್ಷರ ಭೇಟಿ ನಂತರ ಉಂಟಾದ ವರ್ಧನೆ ಕುರಿತಂತೆ ಮಾತನಾಡಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೮ ಸೆಕೆಂಡ್ಸ್)

ಶ್ರೀಲಂಕಾದ ಪೂರ್ವ ಪ್ರದೇಶಕ್ಕಾಗಿ ೨.೪ ಬಿಲಿಯನ್ ಶ್ರೀಲಂಕಾ ರೂಪಾಯಿ ಮೌಲ್ಯದ ಪ್ಯಾಕೇಜ್ ನಿಗದಿಪಡಿಸಲಾಗಿದ್ದು, ಅನುರಾಧಪುರದಲ್ಲಿ ನಾಳೆ ಮಾಹೋ ಓಮಾನ್ ಥೈ ರೈಲು ಮಾರ್ಗವನ್ನು ಉದ್ಘಾಟಿಸಲಾಗುತ್ತಿದೆ ಎಂದು ಪ್ರಧಾನಿ ಹೇಳಿದರು. ತಮಿಳು ನಾಗರಿಕರಿಗಾಗಿ ನಿರ್ಮಿಸಲಾಗುತ್ತಿರುವ ೧೦ ಸಾವಿರ ಮನೆಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು. ಟ್ರಿಂಕೊಮಲಿಯಲ್ಲಿರುವ ತಿರುಕೋಣೆಶ್ವರಂ ದೇವಾಲಯದ ಪುನರುಜ್ಜೀವನಕ್ಕೆ ಭಾರತ ನೆರವು ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ರಕ್ಷಣಾ ಸಹಕಾರ ಕ್ಷೇತ್ರದಲ್ಲಿ ಕೈಗೊಳ್ಳಲಾದ ಒಪ್ಪಂದವನ್ನು ಪ್ರಧಾನಿ ಸ್ವಾಗತಿಸಿದರು. ಉಭಯ ದೇಶಗಳ ಮಿತ್ರತ್ವದ ಪ್ರತೀಕವಾಗಿ ಶ್ರೀಲಂಕಾ ಅಧ್ಯಕ್ಷರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಿತ್ರ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದರು. ನಂತರ ಪ್ರಧಾನಿ ನರೇಂದ್ರ ಮೋದಿ ಅವರು, ಶ್ರೀಲಂಕಾದ ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮ್‌ದಾಸ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಕೊಲಂಬೋದಲ್ಲಿ ಭಾರತೀಯ ಶಾಂತಿ ಪಾಲನಾ ಪಡೆಯ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ನಮನ ಸಲ್ಲಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು, ೨೦೧೫ ರಲ್ಲಿಯೂ ಈ ಸ್ಮಾರಕಕ್ಕೆ ಭೇಟಿ ನೀಡಿದ್ದರು.

೧೯೮೭ ಹಾಗೂ ೧೯೯೦ ರ ನಡುವೆ ಶ್ರೀಲಂಕಾದಲ್ಲಿ ಶಾಂತಿ ನೆಲೆಸಲು ಭಾರತದ ಶಾಂತಿ ಪಾಲನಾ ಪಡೆಯನ್ನು ನಿಯೋಜಿಸಲಾಗಿತ್ತು. ಈ ಕಾರ್ಯಾಚರಣೆಯಲ್ಲಿ ತ್ಯಾಗ ಬಲಿದಾನ ಮಾಡಿದ ೧ ಸಾವಿರದ ೧೬೫ ಭಾರತೀಯ ಸಿಬ್ಬಂದಿ ಗೌರವಾರ್ಥ ೨೦೦೮ ರಲ್ಲಿ ಶ್ರೀಲಂಕಾ ಸರ್ಕಾರ ಈ ಸ್ಮಾರಕವನ್ನು ನಿರ್ಮಿಸಿದೆ.

**<><*<><>*><>**

ಹಿಂದೂ ಮಹಾಸಾಗರದಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡುವಲ್ಲಿ ಭಾರತೀಯ ನೌಕಾಪಡೆ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಅವರು, ಕರ್ನಾಟಕದ ಕಾರವಾರದ ಐಎನ್‌ಎಸ್ ನೌಕಾನೆಲೆಯಲ್ಲಿ |ಔS ಸಾಗರ ಕಾರ್ಯಾಚರಣೆಗೆ ಇಂದು ಹಸಿರು ನಿಶಾನೆ ತೋರಿ ಮಾತನಾಡಿದರು. ಅಂತಾರಾಷ್ಟ್ರೀಯ ಕಡಲ ದಿನಾಚರಣೆ ಮಹತ್ವವನ್ನು ವಿವರಿಸಿದ ಸಚಿವರು, ೧೯೧೯ರಲ್ಲಿ ಇದೇ ದಿನದಂದು ಭಾರತದ ಮೊದಲ ವಾಣಿಜ್ಯ ಹಡಗು ಎಸ್.ಎಸ್.ಲೊಯಲ್ಟಿ ಮುಂಬಯಿನಿಂದ ಇಂಗ್ಲೆಂಡ್ ಗೆ ಪಯಣಿಸಿತ್ತು. ಇದರ ಸವಿ ನೆನಪಿಗೆ ೧೯೬೪ ರಿಂದ ದೇಶದಲ್ಲಿ ಕಡಲ ದಿನ ಆಚರಿಸಿ ಮಾಡಲಾಗುತ್ತಿದೆ ಎಂದರು. ಹಿಂದೂ ಮಹಾಸಾಗರದಲ್ಲಿ ಸುರಕ್ಷತೆ ಜೊತೆಗೆ ನಮ್ಮ ಮಿತ್ರ ರಾಷ್ಟ್ರಗಳ ಹಿತ ರಕ್ಷಣೆಗೆ ಒತ್ತು ನೀಡಲಾಗುವುದು. ವಾಣಿಜ್ಯ ಹಡಗುಗಳನ್ನು ಕಡಲ್ಗಳ್ಳರು ಮತ್ತು ಅಪಹರಣ ವಾದಾಗ ಅದರ ರಕ್ಷಣೆಯಲ್ಲಿ ಭಾರತದ ನೌಕಾಪಡೆ ಮೊದಲ ಪಾತ್ರ ವಹಿಸುತ್ತದೆ. ಅಲ್ಲದೆ ಇತರೆ ದೇಶಗಳ ವಾಣಿಜ್ಯ ಹಡಗುಗಳ ಅಪಹರಣವಾದಾಗಲೂ ಅವುಗಳ ರಕ್ಷಣೆಗೆ ಭಾರತದ ಪಡೆ ಧಾವಿಸಿದೆ ಎಂದು ಹೇಳಿದರು. ಇದೇ ವೇಳೆ ಸೀಬರ್ಡ್ ಯೋಜನೆಯ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯಗಳ ೨ ಸಾವಿರ ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳನ್ನು ಸಚಿವರು ಉದ್ಘಾಟಿಸಿದರು. ಸೀಬರ್ಡ್ ಯೋಜನೆಯ ಕಾಮಗಾರಿಗಳಿಗೆ ಕಚ್ಚಾ ಸಾಮಗ್ರಿಗಳನ್ನು ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಪಡೆಯಲಾಗಿದೆ ಎಂದು ಹೇಳಿದರು.

**<><*<><>*><>**

ಮಾವೋವಾದಿಗಳು ಶಸ್ತ್ರ ತ್ಯಜಿಸಿ, ಸಮಾಜದ ಮುಖ್ಯ ವಾಹಿನಿಗೆ ಸೇರಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮನವಿ ಮಾಡಿದ್ದಾರೆ. ಅವರು, ಛತ್ತೀಸ್‌ಗಢದ ದಾಂತೆವಾಡದಲ್ಲಿಂದು ಬಸ್ತಾರ್ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

### ಧ್ವನಿ: ಅಮಿತ್ ಶಾ ಕೇಂದ್ರ ಗೃಹ ಸಚಿವ ( ೧೫ ಸೆಕೆಂಡ್ಸ್)

ಛತ್ತೀಸ್‌ಗಢದಲ್ಲಿ ಬರುವ ಮಾರ್ಚ್ ವೇಳೆಗೆ ನಕ್ಸಲ್ ಚಟುವಟಿಕೆಯನ್ನು ಸಂಪೂರ್ಣವಾಗಿ ಸಮಾಪನಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ಸಚಿವ ಅಮಿತ್ ಶಾ, ಎಡಪಂಥಿಯ ತೀರ್ವವಾದಿಗಳ ಚಟುವಟಿಕೆ ಸಮಾಪನಗೊಳಿಸುವಂತೆ ಕುರಿತಂತೆ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

<><*<><>*><>

ತಮಿಳುನಾಡಿನ ರಾಮೇಶ್ವರಂನಲ್ಲಿ ಆಧುನೀಕರಿಸಿದ ಪಂಬನ್ ಸೇತುವೆ ದೇಶದ ಇತಿಹಾಸದ ಮಹತ್ವದ ಮೈಲಿಗಲ್ಲಾಗಿದೆ ಎಂದು ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಚೆನ್ನೈ ವಿಮಾನ ನಿಲ್ದಾಣದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಸಮುದ್ರದಲ್ಲಿ ನಿರ್ಮಿಸಲಾದ ಮೊದಲ ಊರ್ಧ್ವ ಲಿಫ್ಟ್ ಸೇತುವೆಯಾಗಿದ್ದು, ತಮಿಳು ಸಂಸ್ಕೃತಿಯ ಅದ್ಭುತ ವಾಸ್ತುಶಿಲ್ಪವಾಗಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಮಾರ್ಗದರ್ಶನದಲ್ಲಿ ಈ ಸೇತುವೆಯನ್ನು ಅದ್ಭುತ ವಾಸ್ತುಶಿಲ್ಪವಾಗಿ ನಿರ್ಮಿಸಲಾಗಿದೆ. ಪ್ರಧಾನಿ ಅವರು, ನಾಳೆ ಸೇತುವೆಯನ್ನು ಉದ್ಘಾಟಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಈ ಐತಿಹಾಸಿಕ ಕಾರ್ಯಕ್ರಮಕ್ಕಾಗಿ ವ್ಯಾಪಕ ವ್ಯವಸ್ಥೆ ಹಾಗು ಬಂದೋಬಸ್ತ್ ಮಾಡಲಾಗಿದೆ.

<><*<><>*><>

ಕಳೆದ ವರ್ಷ ನೈಸರ್ಗಿಕ ವಿಕೋಪಗಳನ್ನು ಎದುರಿಸಿದ ಬಿಹಾರ, ಹಿಮಾಚಲ ಪ್ರದೇಶ, ತಮಿಳುನಾಡು ಮತ್ತು ಪುದುಚೇರಿಗೆ ಕೇಂದ್ರಾಡಳಿತ ಪ್ರದೇಶಕ್ಕೆ ಕೇಂದ್ರ ಸರ್ಕಾರ ಇಂದು ಒಂದು ಸಾವಿರದ ೨೮೦ ಕೋಟಿ ರೂಪಾಯಿಗೂ ಅಧಿಕ ಹೆಚ್ಚುವರಿ ಸಹಾಯವನ್ನು ಅನುಮೋದಿಸಿದೆ. ವಿಕೋಪಗಳು ಸಂಭವಿಸಿದ ತಕ್ಷಣ, ಔಪಚಾರಿಕ ಮನವಿ ಪತ್ರಕ್ಕಾಗಿ ಕಾಯದೆ ಕೇಂದ್ರ ಸರ್ಕಾರ, ಅಂತರ ಸಚಿವಾಲಯ ಕೇಂದ್ರ ತಂಡಗಳನ್ನು ಈ ರಾಜ್ಯಗಳಿಗೆ ನಿಯೋಜಿಸಿತ್ತು ಎಂದು ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

<><*<><>*><>

ನಿನ್ನೆ ನಿಧನ ಹೊಂದಿದ ಹಿಂದಿ ಚಲನಚಿತ್ರರಂಗದ ಮೇರು ನಟ, ನಿರ್ದೇಶಕ ಮನೋಜ್‌ಕುಮಾರ್ ಅವರ ಪಾರ್ಥೀವ ಶರೀರದ ಅಂತ್ಯಕ್ರಿಯೆ ಮುಂಬೈನ ಪವನ ಹಂಸ ಚಿತಾಗಾರದಲ್ಲಿ ಇಂದು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. ಭಾರತೀಯ ಚಿತ್ರರಂಗದ ಹಿರಿಯ ಕಲಾವಿದರಾದ ಅಮಿತಾ ಬಚ್ಚನ್, ಪ್ರೇಮ್ ಚೋಪ್ರಾ, ಸಲೀಂ ಖಾನ್, ಅನುಮಲ್ಲಿಕ್ ಸೇರಿದಂತೆ ಅನೇಕ ಗಣ್ಯರು ಅಂತ್ಯ ಸಂಸ್ಕಾರ ಸಂದರ್ಭದಲ್ಲಿ ಉಪಸ್ಥಿತರಿದ್ದು, ಗೌರವ ಸಲ್ಲಿಸಿದರು. ಮನೋಜ್‌ಕುಮಾರ್ ಅವರು, ದೇಶ ಪ್ರೇಮ ಬಿಂಬಿಸುವ ಶಹೀದ್, ಕ್ರಾಂತಿ, ಪೂರಭ್ ಔರ್ ಪಶ್ಚಿಮ್ ಸೇರಿದಂತೆ ಅನೇಕ ಚಲನಚಿತ್ರಗಳನ್ನು ನಿರ್ದೇಶಿಸಿ, ನಟಿಸಿದ್ದರು. ಭಾರತ್ ಕುಮಾರ್ ಎಂದೇ ಪ್ರಸಿದ್ಧರಾಗಿದ್ದ ಅವರು, ಚಲನಚಿತ್ರ ರಂಗದ ಅತ್ಯುನ್ನತ ಗೌರವ ದಾದಾ ಪಾಲ್ಕೆ ಪ್ರಶಸ್ತಿಗೂ ಪಾತ್ರರಾಗಿದ್ದರು.

<><*<><>*><>

ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್‌ನ ದಿನದ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಡೆಲ್ಲಿ

ಕ್ಯಾಪಿಟಲ್ಸ್ ತಂಡ ೨೫ ರನ್‌ಗಳಿಂದ ಪರಾಭವಗೊಳಿಸಿದೆ. ಪಂಜಾಬ್‌ನ ತಿರಾದಲ್ಲಿ ನಡೆಯುತ್ತಿರುವ ದಿನದ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಪಂಜಾಬ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**